**ಇಂಡಿಯನ್ ಓಶನ್ ರಿಮ್ ಅಸೋಸಿಯೇಷನ್ (IORA) ಮಂತ್ರಿ ಮಂಡಳಿಯ(COM) 24 ನೇ ಸಭೆ (ಮೇ 21, 2025)**

ಮೇ 21, 2025

IORA ಅಧ್ಯಕ್ಷತೆ ವಹಿಸಿರುವ ಶ್ರೀಲಂಕಾ ಆಯೋಜನೆಯಲ್ಲಿ ಇಂಡಿಯನ್ ಓಶನ್ ರಿಮ್ ಅಸೋಸಿಯೇಷನ್ (IORA) ಮಂತ್ರಿ ಮಂಡಳಿ(COM)ಯ 24 ನೇ ಸಭೆಯು, 2025 ರ ಮೇ 21 ರಂದು ವರ್ಚುವಲ್ ಆಗಿ "ಭವಿಷ್ಯದ ಪೀಳಿಗೆಗೆ ಸುಸ್ಥಿರ ಹಿಂದೂ ಮಹಾಸಾಗರ" ಥೀಮ್ ಅಡಿಯಲ್ಲಿ ನಡೆಯಿತು".  ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ (ಪೂರ್ವ) ಶ್ರೀ ಪಿ. ಕುಮಾರನ್ ಅವರು IORA COM ನ 24 ನೇ ಸಭೆಯಲ್ಲಿ ಭಾರತೀಯ ನಿಯೋಗದ ನೇತೃತ್ವ ವಹಿಸಿದ್ದರು.

2. ಭಾರತವು ಪ್ರಸ್ತುತ IORA ಉಪಾಧ್ಯಕ್ಷ ಸ್ಥಾನ ಹೊಂದಿದೆ ಮತ್ತು ಟ್ರೊಯ್ಕಾದ ಭಾಗವಾಗಿದೆ. ಭಾರತವು 2025-2027 ಅವಧಿಗೆ IORA ಅಧ್ಯಕ್ಷತೆಯನ್ನು ವಹಿಸಿಕೊಳ್ಳಲಿದೆ.  24 ನೇ COM ಸಭೆಯು ಎಲ್ಲ 22 IORA ಸದಸ್ಯ ರಾಷ್ಟ್ರಗಳು ಮತ್ತು IORA ಯ 12 ಸಂವಾದ ಪಾಲುದಾರರಿಂದ ಮಂತ್ರಿಗಳು ಮತ್ತು ಉನ್ನತ ಮಟ್ಟದ ಪ್ರತಿನಿಧಿಗಳ ಭಾಗವಹಿಸುವಿಕೆಗೆ ಸಾಕ್ಷಿಯಾಯಿತು.  ಸಭೆಯಲ್ಲಿ, ಸದಸ್ಯ ರಾಷ್ಟ್ರಗಳು IORA ಯನ್ನು ಬಲಪಡಿಸುವುದರ ಕುರಿತು, ಪ್ರಾದೇಶಿಕ ಆಸಕ್ತಿಯ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು ಮತ್ತು 'ಕೊಲಂಬೊ ಕಮ್ಯೂನಿಕ್' ಅನ್ನು ಅಳವಡಿಸಿಕೊಳ್ಳಲಾಯಿತು.

3. ಕಾರ್ಯದರ್ಶಿ (ಪೂರ್ವ) ತಮ್ಮ ಹೇಳಿಕೆಯಲ್ಲಿ, ಹಿಂದೂ ಮಹಾಸಾಗರ ಪ್ರದೇಶದ ದೃಷ್ಟಿಕೋನಕ್ಕೆ ಅನುಗುಣವಾಗಿ, ಹಿಂದೂ ಮಹಾಸಾಗರದ ರಾಷ್ಟ್ರಗಳ ಯೋಗಕ್ಷೇಮ ಮತ್ತು ಪ್ರಗತಿಗೆ ಭಾರತದ ಬದ್ಧತೆಯನ್ನು ಒತ್ತಿ ಹೇಳಿದರು.  ಹಿಂದೂ ಮಹಾಸಾಗರ ಪ್ರದೇಶದಲ್ಲಿ ಸಾಮಾನ್ಯ ಹಿತಾಸಕ್ತಿಯ ವಿಷಯಗಳ ಕುರಿತು ಒಮ್ಮುಖವನ್ನು ತಲುಪಲು ಸದಸ್ಯ ರಾಷ್ಟ್ರಗಳ ನಡುವಿನ ಸಹಕಾರ, ಸಹಯೋಗ ಮತ್ತು ಸಂಘಟಿತ ಪ್ರಯತ್ನಗಳು ಅತ್ಯಗತ್ಯ ಎಂದು ಅವರು ಹೇಳಿದರು.  ಭಯೋತ್ಪಾದನೆಯು ರಾಷ್ಟ್ರ ಪ್ರಾಯೋಜಿತವಾಗಿರಲಿ ಅಥವಾ ವ್ಯಕ್ತಿಗಳಿಂದ ನಡೆಸಲ್ಪಡಲಿ, ಅದು ಅದರ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳಲ್ಲಿ ಈ ಪ್ರದೇಶದ ಶಾಂತಿ, ಭದ್ರತೆ ಮತ್ತು ಅಭಿವೃದ್ಧಿಗೆ ಗಂಭೀರ ಬೆದರಿಕೆಯನ್ನು ಒಡ್ಡುತ್ತದೆ ಮತ್ತು ಅದನ್ನು ನಿಸ್ಸಂದಿಗ್ಧವಾಗಿ ಖಂಡಿಸಬೇಕು ಎಂದು ಕಾರ್ಯದರ್ಶಿ (ಪೂರ್ವ) ದೃಢವಾಗಿ ಹೇಳಿದರು.

ನವ ದೆಹಲಿ

ಮೇ 21, 2025